sdmimd

**Aandolana**

Date: Tuesday, March 25, 2014 Page No.5

Edition: Mysore Language: Kannada

# ವಿದ್ಯಾರ್ಥಿಗಳ ನಿಯತಕಾಲಿಕಕ್ಕೆ ಡಿಜಿಟಲ್ ಸ್ಪರ್ಶ



ಮೈಸೂರು,ಮಾ.೨೪-ನಗರದ ಎಸ್‌ಡಿಎಂ ಐಎಂಡಿ ವಿದ್ಯಾರ್ಥಿಗಳ ನಿಯತಕಾಲಿಕ 'ಡೈಮೆನ್ಶನ್ಸ್'ನ ಡಿಜಿಟಲ್ ಅವತರಣಿಕೆಗೆ ಎಸ್‌ಡಿಎಂ ಎಜುಕೇಶನಲ್ ಟ್ರಸ್ಟ್ ಕಾರ್ಯದರ್ಶಿ ಪ್ರೊ.ಎಸ್.ಪ್ರಭಾಕರ್ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪ್ರಭಾಕರ್, ಕಾಗದ ಉಳಿಸುವ ಮೂಲಕ ನಿಸರ್ಗವನ್ನು ರಕ್ಷಿಸುವ ಇ-ಡೈಮೆನ್ಶನ್ಸ್ ಪ್ರಾರಂಭದ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದರು. ವಿದ್ಯಾರ್ಥಿಗಳ ಉದ್ಯಮಶೀಲತಾ ಕುಶಲತೆಯನ್ನು ಇನ್ನೂ ಹೆಚ್ಚು ಉಪಯೋಗಿಸಿಕೊಳ್ಳಬೇಕು ಎಂದು ಅವರು ಹೇಳಿದರು.

ಸಾಂಪ್ರದಾಯಿಕ ಪುಸ್ತಕ ರೂಪದಲ್ಲಿ ೧೯೯೯ರಿಂದ ಪ್ರಕಾಶಿತಗೊಳ್ಳುತ್ತಿದ್ದ ಡೈಮೆನ್ಶನ್ಸ್ ಈಗ ಅಂತರ್ಜಾಲದ ಮೂಲಕ ಹೆಚ್ಚು ಓದುಗರನ್ನು ತಲುಪಲಿದೆ. ಡಿಜಿಟಲ್ ಅವತರಣಿಕೆಯ ಮೊದಲನೆಯ ಸಂಚಿಕೆಯಲ್ಲಿ ಉದ್ಯಮಶೀಲತೆ ಮತ್ತು ಸಂಬಂಧಿತ ವಿಷಯಗಳಿಗೆ ಪ್ರಾಮುಖ್ಯತೆ ಕೊಡಲಾಗಿದೆ.

ಉತ್ತಮ ಲೇಖನಗಳು ಮತ್ತು ವ್ಯವಹಾರ ನಿರ್ವಹಣಾ ಕ್ಷೇತ್ರದ ದಿಗ್ಗಜರೊಂದಿಗೆ ನಡೆಸಿದ ಸಂದರ್ಶನಗಳನ್ನೂ ಪ್ರಕಾಶಿಸುವುದರ ಮೂಲಕ ಇ-ಡೈಮೆನ್ಶನ್ಸ್ ವ್ಯವಹಾರ ನಿರ್ವಹಣ ವಿದ್ಯಾರ್ಥಿಗಳು ಮತ್ತು ಉದ್ಯಮ ವರ್ಗದ ನಡುವೆ ಸೇತುವೆಯಾಗಲಿದೆ.